**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು**
**ಜೆ.ಎಂ.ಎಫ್.ಸಿ. ಕನಕಪುರ.**

CC No.384/2013

CW -1 PW -1

| | | |
|---|---|---|
| ಹೆಸರು | ಃ | ನಾಗೇಶ್ |
| ತಂದೆಯ ಹೆಸರು | ಃ | ಹನುಮಂತಯ್ಯ |
| ವಯಸ್ಸು | ಃ | 39 ವರ್ಷ |
| ಉದ್ಯೋಗ | ಃ | ಡ್ರೈವರ್ |
| ವಾಸ | ಃ | ಅಂಗರಪಾಳ್ಯ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 03.10.2024.

ಚಾಸಾ-2 ರಿಂದ 4 ಗೊತ್ತಿಲ್ಲ. ಚಾಸಾ- 5 ರಿಂದ 8 ಗೊತ್ತು.

ದಿನಾಂಕ 11.09.2012 ರಂದು ಕುಮಾರ್ ಎಂಬ ಟ್ರಾಕ್ಟರ್ ಮಾಲೀಕರು ನನ್ನ ತಮ್ಮ ರವೀಶ್ ನನ್ನು ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗಿದ್ದರು. ನನ್ನ ತಮ್ಮ ಟ್ರಾಕ್ಟರ್ ನಲ್ಲಿ ಇದ್ದಾಗ ಹುಚ್ಚೇಗೌಡನದೊಡ್ಡಿ ಹತ್ತಿರ ಟ್ರಾಕ್ಟರ್ ಉರುಳಿ ಬಿದ್ದು ಅದರಲ್ಲಿದ್ದ ನನ್ನ ತಮ್ಮ ರವೀಶ್ ಮೃತ ಪಟ್ಟಿರುತ್ತಾನೆ. ನಂತರ ಪೋಲಿಸರು ಬಂದು ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದರು ಹಾಗೂ ನನ್ನ ತಮ್ಮನ ಮೃತ ದೇಹದ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಆ ದಿನ ಟ್ರಾಕ್ಟರ್ ಚಲಾಯಿಸುತ್ತಿದ್ದ ವ್ಯಕ್ತಿ ಯೇ ನ್ಯಾಯಾಲಯದ ಮುಂದಿರುವ ಆರೋಪಿಯಾಗಿರುತ್ತಾನೆ.

ಈಗ ತೋರಿಸುತ್ತಿರುವ ಮಹಜರ್ ಅನ್ನು ನೋಡಿ ಸಾಕ್ಷಿಯು ಗುರುತಿಸಿದ್ದು ಅದನ್ನು ನಿಪಿ-3 ಗುರುತಿಸಲಾಯಿತು. ಅದರಲ್ಲಿರುವ

ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಅನುಮತಿಸಲಾಯಿತು).

ಪಾಟೀ ಸವಾಲು : ಎಪಿಪಿ ಯವರಿಂದ :

ಆ ದಿನ ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಕನಕಪುರ ಕಡೆಯಿಂದ ಹಾರೋಹಳ್ಳಿ ಕಡೆಗೆ KA-42-T-3039 ರ ಟ್ರಾಕ್ಟರ್ ಮತ್ತು ಟ್ರಾಲಿಯಲ್ಲಿ ನೀಲಗಿರಿ ಮರಗಳನ್ನು ತುಂಬಿಕೊಂಡು ಹೋಗುತ್ತಿದ್ದು, ಸದರಿ ಟ್ರಾಕ್ಟರ್ ಹುಚ್ಚೇಗೌಡನದೊಡ್ಡಿ ಬಳಿ ಇಳಿಜಾರಿನಲ್ಲಿ ಇದ್ದಾಗ ಆರೋಪಿ ಅತಿ ವೇಗ ಮತ್ತು ಅಜಾಗರೂಕತೆಯಿಂದ ಸದರಿ ಟ್ರಾಕ್ಟರ್ ಚಾಲನೆ ಮಾಡುತ್ತಿದ್ದ ಪರಿಣಾಮವಾಗಿ, ಸದರಿ ಟ್ರಾಕ್ಟರ್ ರಸ್ತೆಯ ಎಡಭಾಗಕ್ಕೆ ಉರುಳಿ ಬಿದ್ದು ಟ್ರಾಕ್ಟರ್ ನಲ್ಲಿ ಕುಳಿತ್ತಿದ್ದ ರವೀಶ್ ಮತ್ತು ನಂಜುಂಡಪ್ಪ ನವರಿಗೆ ತೀವ್ರ ರಕ್ತಗಾಯವಾಗಿ, ರವೀಶ್ ಆಸ್ಪತ್ರೆಗೆ ಬರುವಷ್ಟರಲ್ಲಿ ಮೃತ ಪಟ್ಟಿದ್ದು, ನಂಜುಂಡಪ್ಪ ನವರಿಗೆ ಬಾರಿ ಗಾಯಗಳಾಗಿದ್ದು ಕನಕಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು ಎಂದರೆ ಸರಿ. ಆ ಬಗ್ಗೆ ನಾನು ಪೋಲಿಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಈ ಹಂತದಲ್ಲಿ ದೂರನ್ನು ತೋರಿಸಿದ್ದು ದೂರನ್ನು ನಿಪಿ-4 ಎಂದು ಅದರಲ್ಲಿನ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ನಿಪಿ-3 ರಂತೆ ಮಹಜರ್ ಮಾಡುವಾಗ ಟ್ರಾಕ್ಟರ್ ಮತ್ತು ಟ್ರ್ಯಾಲಿಯನ್ನು ಮುಂದಿನ ತನಿಖೆಗಾಗಿ ವಶಪಡಿಸಿಕೊಳ್ಳಲಾಯಿತು ಎಂದರೆ ಸರಿ.

<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದಃ</u>

ನಮ್ಮ ಊರಿನಿಂದ ಹುಚ್ಚೇಗೌಡನದೊಡ್ಡಿ 10 ಕಿ ಮೀ ದೂರದಲ್ಲಿದೆ. ದಿನಾಂಕ 11.09.2012 ರಂದು ನಾನು ಬೆಂಗಳೂರಿನಲ್ಲಿದ್ದೆ. ಅಪಘಾತದ ಬಗ್ಗೆ ನನಗೆ ನನ್ನ ಮಾವ ಫೋನ್ ಮಾಡಿ ತಿಳಿಸಿದ್ದರು. ನನಗೆ ಮಾಹಿತಿ ಬಂದಾಗ ಸುಮಾರು 3.00 ಗಂಟೆ ಆಗಿತ್ತು. ಬೆಂಗಳೂರಿನಿಂದ ಹುಚ್ಚೇಗೌಡನದೊಡ್ಡಿ ಗೆ ಬಂದಾಗ 4.00 ಗಂಟೆ ಆಗಿತ್ತು. ನಾನು ಹೋದಾಗ ಅಲ್ಲಿ ಜನ ಸೇರಿದ್ದರು. ನಾನು ಸ್ಥಳಕ್ಕೆ ಹೋದಾಗ ಚಾಸಾ-2 ಮತ್ತು ರವೀಶ್ ಅಲ್ಲೇ ಇದ್ದರು. ಅಪಘಾತ ಸುಮಾರು 2.30 ರ ಸಮಯಕ್ಕೆ ಆಗಿದೆ. ನಾನು ಹೋದಾಗ ಎಲ್ಲರೂ ಅಲ್ಲೇ ಇದ್ದರು. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಆ ಕಾರಣದಿಂದ ಯಾರಿಂದ, ಯಾರ ತಪ್ಪಿನಿಂದ ಅಪಘಾತವಾಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಇಳಿಜಾರಿನ ದಾರಿಯಾದ ಕಾರಣ, ರಸ್ತೆ ಸರಿಯಿರದ ಕಾರಣ ಅಪಘಾತವಾಯಿತು. ಸದರಿ ರಸ್ತೆ ಕನಕಪುರ ಬೆಂಗಳೂರು ಮುಖ್ಯ ರಸ್ತೆ NH 209 ಎಂದರೆ ಸರಿ. ಸದರಿ ರಸ್ತೆಯ ಸ್ವಲ್ಪ ಮುಂದೆ ಹೋದರೆ ತಿರುವಿದೆ ಎಂದರೆ ಸರಿ. ವಾಹನದಲ್ಲಿ ಎಷ್ಟು ಮರಗಳಿದ್ದವು ಎಂದು ನನಗೆ ಗೊತ್ತಿಲ್ಲ. ಸದರಿ ರಸ್ತೆ ತಿರುವಿನಿಂದ ಕೂಡಿರುವ ಕಾರಣ ಅಲ್ಲಿ ವೇಗವಾಗಿ ವಾಹನದ ಚಲಾಯಿಸಲು ಸಾಧ್ಯವಿಲ್ಲ ಎಂದರೆ ಸರಿ. ಅಪಘಾತವಾದ ಬಗ್ಗೆ ನನಗೆ ನನ್ನ ಮಾವ ಮಾಹಿತಿ ನೀಡಿದರು. ಆರೋಪಿಯನ್ನು ನಾನು ಅಪಘಾತದ ಸ್ಥಳದಲ್ಲಿ ನೋಡಿದ್ದೆ , ಆದರೆ ಆತನ ಹೆಸರು ವಿಳಾಸ ಗೊತ್ತಿರಲಿಲ್ಲ. ಅಪಘಾತ ಮಾಡಿದ ವ್ಯಕ್ತಿ ಈತನೇ ಎಂದು ದೂರಿನಲ್ಲಿ ನಾನು ಆ ದಿನ ಹೇಳಿ

ಬರೆಸಿಲ್ಲ. ನನ್ನ ತಮ್ಮ 3 ತಿಂಗಳಿಂದ ಕುಮಾರ್ ರವರ ಬಳಿ ಕೆಲಸಕ್ಕೆ ಹೋಗುತ್ತಿದ್ದ. ನೀಲಗಿರಿ ಮರಗಳನ್ನು ಎಲ್ಲಿಂದ ತುಂಬಿಕೊಂಡು ಬರುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಮಹಲಿಂಗಯ್ಯ ನವರು ನೀಡಿರುವ ಮಾಹಿತಿಯ ಮೇರೆಗೆ ನಾನು ಸಾಕ್ಷಿ ಹೇಳುತ್ತಿದ್ದೇನೆ.

ನಿಪಿ-4 ಅನ್ನು ಯಾರು ಬರೆದರು ಎಂದ ನನಗೆ ಗೊತ್ತಿಲ್ಲ. ನಿಪಿ-4 ಅನ್ನು ನಾನೇ ಹೇಳಿ ಬರೆಸಿರುತ್ತೇನೆ. ದೂರು ನೀಡಿದಾಗ ಸುಮಾರು 7.00 ಗಂಟೆ ಸಮಯವಾಗಿತ್ತು. ನಾನು ದೂರು ನೀಡಿದ ದಿನ ಒಂದಕ್ಕಿಂತ ಹೆಚ್ಚು ದಾಖಲೆಗಳಿಗೆ ಸಹಿ ಹಾಕಿದ್ದೇನೆ.

ಪೋಲಿಸರು ನನ್ನ ಸಮಕ್ಷಮ ನಿಪಿ-3 ರಂತೆ ಮಹಜರ್ ಮಾಡಿರುತ್ತಾರೆ. ನಿಪಿ-3 ಅನ್ನು ಪೋಲಿಸರು ನನಗೆ ಓದಿ ಹೇಳಿಲ್ಲ. ನಿಪಿ-3 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಆರೋಪಿ ಟ್ರಾಕ್ಟರ್ ಅನ್ನು ಅತಿವೇಗವಾಗಿ ಚಲಾಯಿಸಿರದ ಕಾರಣ ಅಪಘಾತವಾಗಿ ನನ್ನ ತಮ್ಮ ರವೀಶ್ ಮೃತಪಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿ ಸುಳ್ಳು ಹೇಳುತಿತದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ಸ್ಥಳಕ್ಕೆ ಬಂದು ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿ ಕನಕಪುರ ಮತ್ತು ಬೆಂಗಳೂರಿನಲ್ಲಿ ಅವರಿಗೆ ಚಿಕಿತ್ಸೆ ಕೊಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಟ್ರಾಕ್ಟರ್ ಮತ್ತು ಟ್ರೇಲರ್ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಆರೋಪಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ : ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಕನಕಪುರ**